

# ಚಿತ್ರದ ಕೆರೆಗೆ ಪಾರಿವಾಳಗಳ ಹಾರ!

ತೀವ್ರವಾದ ನೋವನ್ನು ಅಭಿವ್ಯಕ್ತಿಗೊಳಿಸುವ ಕಲೆಯ ಮೂಲಕವೇ ಮನುಷ್ಯ ಬಿಡುಗಡೆಯನ್ನು ಹೊಂದುವ ಸಾಧ್ಯತೆಯನ್ನು ಕಾವ್ಯಾತ್ಮಕವಾಗಿ ಹೇಳುವ ಕಿರುಚಿತ್ರವಿದು.

■ ಗೌರಿ

ಕಲೆ, ಕಲಾಕಾರ ಮತ್ತು ಬದುಕಿಗೆ ಇರುವ ಸಂಬಂಧ ತುಂಬ ಸಂಕೀರ್ಣವಾದದ್ದು. ಹಲವು ಸಲ ಯಾವುದು ನಿಜ, ಯಾವುದು ಅದರ ಪ್ರತಿಬಿಂಬ ಎಂದು ಗೊತ್ತಾಗದಷ್ಟು ಸೂಕ್ಷ್ಮವಾಗಿ ಅವು ಹೆಣೆದುಕೊಂಡಿರುತ್ತವೆ. ಈ ಸಂಕೀರ್ಣತೆಯ ನಡುವಿನಲ್ಲಿಯೇ ಬದುಕನ್ನು ಅರ್ಥಮಾಡಿಕೊಳ್ಳುವ ಕೀಲಿಕೈ ಕೂಡ ಇರುತ್ತದೇನೋ. ಹಾಗಾಗಿಯೇ ಎಲ್ಲ ಕಲೆಗಳೂ ಮನುಷ್ಯನ ಬದುಕಿನ ಮೇಲು ಮೇಲಿನ ನೋವು, ದುಃಖಗಳಿಂದ ಹೊರಟು ಅದರ ಆಳಕ್ಕಿಳಿದು ಬದುಕಿನ ಅರ್ಥವನ್ನು ಹುಡುಕುವ ಶೋಧನೆಗೆ ಮುಂದಾಗುತ್ತವೆ.

ತಮಿಳಿನ ಕಲೈನಾಥನ್ ಕಲೈಚೆಲ್ವನ್ ಅವರು ನಿರ್ದೇಶಿಸಿರುವ 'ಟು ಡೌವ್ಸ್ ಆನ್ ಎ ಪೇಂಟೆಡ್ ಲೇಕ್' ಕಿರುಚಿತ್ರವೂ ಇಂಥದ್ದೇ ಒಂದು ಶೋಧನೆಯ ಪ್ರಯತ್ನವಾಗಿ ಕಾಣಿಸುತ್ತದೆ. ಈ ಕಿರುಚಿತ್ರದ ಶೀರ್ಷಿಕೆಯಲ್ಲಿಯೇ ಒಂದು ವಿಚಿತ್ರ ಸಂದಿಗ್ಧವಿದೆ. ಇಲ್ಲಿ ಎರಡು ಪಾರಿವಾಳಗಳ ಉಲ್ಲೇಖವಿದೆ. ಆದರೆ ಅವು ಇರುವುದು ಎಲ್ಲಿ? ಪೇಂಟೆಡ್ ಲೇಕ್‌ನ ಮೇಲೆ. ಅಂದರೆ ಆ ಸರೋವರ ನಿಜದ ಸರೋವರವಲ್ಲ. ಅದು ಕಲಾವಿದನ ಕಲ್ಪನೆಯಲ್ಲಿ ಜೀವತಳೆದ ಕಲಾಕೃತಿ. ಆದರೆ ಚಿತ್ರದಲ್ಲಿಯಾದರೂ ಅದನ್ನು ಗುರ್ತಿಸುವುದು ಸರೋವರ ಎಂದೇ ವಿನಾ, ಕೃತಕ ಸರೋವರ ಎಂದಲ್ಲ. ಹಾಗೆಂದು ಅದರ ಮೇಲಿರುವ ಪಾರಿವಾಳಗಳು ಕಲಾವಿದನ ಕುಂಚದಲ್ಲಿ ಜೀವತಳೆದವಲ್ಲ. ಹಾಗೊಮ್ಮೆ ಆ ಪಾರಿವಾಳಗಳೂ ಕಲಾಕೃತಿಯ ಭಾಗವೇ ಆಗಿದ್ದರೆ ಸರೋವರಕ್ಕೆ 'ಪೇಂಟೆಡ್' ಎಂಬ ವಿಶೇಷಣ ಸೇರಿಸಬೇಕಾದ ಅಗತ್ಯ ಇರಲಿಲ್ಲ.

ಚಿತ್ರದ ಶೀರ್ಷಿಕೆಯಲ್ಲಿ ಇರುವ, ಈ ಜಗದ ಪ್ರತಿಕೃತಿಯಾಗಿರುವ ಕಲೆ ಮತ್ತೆ ಆ ಜಗದ ಭಾಗವಾಗಿರುವ ಜೀವಗಳ ಮುಖಾಮುಖಿ ಈ ಕಿರುಚಿತ್ರದುದ್ದಕ್ಕೂ ನಡೆಯುತ್ತಲೇ ಇರುತ್ತದೆ. ಹಾಗೆ ನಡೆಯುತ್ತಲೇ ಒಂದು ಅಮೂರ್ತವಾದ ಕಲಾಕೃತಿಯನ್ನೂ ಅದು ನೋಡುಗರ ಮನಸಲ್ಲಿ ನಿರ್ಮಿಸುತ್ತದೆ.



ಹೆಸರು: ಟು ಡೌವ್ಸ್ ಆನ್ ಎ ಪೇಂಟೆಡ್ ಲೇಕ್
ನಿರ್ದೇಶನ: ಕಲೈನಾಥನ್ ಕಲೈಚೆಲ್ವನ್
ನಿರ್ಮಾಣ: ಬ್ಲ್ಯಾಕ್ ಚಾಪರ್ ಫಿಲ್ಮ್ಸ್
ನಿರೂಪಕ: ಗೌತಮ್ ವಾಸುದೇವ ಮೆನನ್
ಛಾಯಾಗ್ರಹಣ: ರಾಬರ್ಟ್ ಮೆಂಟೋವ್
ತಾರಾಗಣ: ಪ್ರಾಸ್ ಲಿಂಗಂ, ಏಂಜಲ್ ಕಾನ್‌ಸ್ಟಂಟ್

ಈ ಕಿರುಚಿತ್ರ ವೀಕ್ಷಣೆಗೆ bit.ly/2Ic3pLR ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಇದನ್ನು ಕಿರುಚಿತ್ರ ಅನ್ನುವುದಕ್ಕಿಂತ ಕಾವ್ಯಚಿತ್ರ ಎಂದರೇ ಹೆಚ್ಚು ಸೂಕ್ತವಾಗಿರುತ್ತದೇನೊ? ವೆಡರನ್ ರಾಜ್‌ಕುಮಾರ್ ಅವರ ಪದ್ಯವನ್ನು ಬಳಸಿಕೊಂಡು ಈ ದೃಶ್ಯಕಾವ್ಯವನ್ನು ಕಟ್ಟಲಾಗಿದೆ. ಇದು ಶುರುವಾಗುವುದೇ ಅಸಂಗತ ಅನಿಸುವಂಥ ಒಂದು ಜಾಗದಲ್ಲಿ. ಅಲ್ಲಿ ಸುತ್ತ ಮುತ್ತಲೂ ಕತ್ತಲು. ನಡುವೆ ಮಾತ್ರ ಬೆಳಕು. ಅಲ್ಲಿಗೆ ಒಬ್ಬ ಮನುಷ್ಯ ಬೆತ್ತಲಾಗಿ ಬರುತ್ತಾನೆ. ನೋವಿನ ಬಣ್ಣದಲ್ಲಿ ಅದ್ದಿ ತೆಗೆದಂತಿರುವ ಅವನು ಕಲಾವಿದನೂ ಹೌದು. ತನ್ನ ಇನಿಯಳಿಂದ ಅಗಲಿರುವ ಅವನು ವಿರಹದ ಬೇಗೆಯಲ್ಲಿ ಬೇಯುತ್ತಿದ್ದಾನೆ. ಆ ವಿರಹ ಎನ್ನುವುದು ಅವನನ್ನು ಸುಡುತ್ತ, ಕ್ಯಾನ್ವಾಸನ್ನು ಬೆಳಗುವಂಥದ್ದು.

ಸಂಕಟವಿಲ್ಲದೆ ಸೃಜನಶೀಲತೆಯಿಲ್ಲ. ಹಾಗಾದರೆ ಸೃಜನಶೀಲತೆ ರೋಗಲಕ್ಷಣವೇ? ಅಥವಾ ರೋಗನಿಧಾನದ ದಾರಿಯೇ? ಈ ಪ್ರಶ್ನೆಗಳಿಗೆ ಉತ್ತರಿಸುವುದು ಬಹುಕಷ್ಟ. ತನ್ನನ್ನು ಅಗಲಿದ ಗೆಳತಿಯನ್ನು ಕ್ಯಾನ್ವಾಸಿನ ಮೇಲೆ ಮರುಜೀವಗೊಳಿಸುತ್ತ ಹೋಗುತ್ತಾನೆ. ಹಾಗೆಂದು ಅವನು ಬಿಡಿಸುವ ಕಲಾಕೃತಿ ಹೆಣ್ಣಿನದಲ್ಲ, ಹೆಣ್ಣೇ ಅವನೊಳಗೆ ಕೂತು ಬಿಡಿಸಿದಂಥ ಕಲಾಕೃತಿಯದು. ಹಾಗೆ ಬಿಡಿಸುತ್ತ ಬಿಡಿಸುತ್ತ ತಾನೇ ಆ ಕಲಾಕೃತಿಯೂ ಆಗಿಹೋಗುತ್ತಾನೆ. ಕಲಾವಿದ ಮತ್ತು ಅವನ ಪ್ರೇಯಸಿ ಇಬ್ಬರೂ ಒಟ್ಟಿಗೇ ಬಣ್ಣದಲ್ಲಿ ತೋಯ್ದು ಒಂದೇ ಬಣ್ಣವಾಗುವ ದೃಶ್ಯ ಕರಗುವಿಕೆಯನ್ನೂ ಅದರ ಮೂಲಕವೇ ಮತ್ತೊಂದಾಗಿ ಹುಟ್ಟುವ ಪ್ರಕ್ರಿಯೆಯನ್ನೂ ಒಟ್ಟೊಟ್ಟಿಗೇ ಸೂಚಿಸುವಂತಿದೆ.

ದೃಶ್ಯಗಳ ಸಂಯೋಜನೆಯಲ್ಲಿಯೂ ಕಾವ್ಯಗುಣ ಇರುವುದು ಈ ಕಿರುಚಿತ್ರದ ಧ್ವನಿಶಕ್ತಿಯನ್ನು ಹೆಚ್ಚಿಸಿದೆ. ಒಂದು ಒಳ್ಳೆಯ ಪದ್ಯ ಓದಿದ, ಒಂದು ಗಾಢವಾದ ಕಲಾಕೃತಿಯನ್ನು ನೋಡಿದ ಅನುಭವವನ್ನು ಈ ಕಿರುಚಿತ್ರ ನೀಡುತ್ತದೆ. ■